**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 355/2015**

ಸಿ.ಡಬ್ಲು-06
ಪಿ.ಡಬ್ಲು-02

| | | |
|---|---|---|
| ಹೆಸರು | ಃ | ಡಾಃ ಅನೀತಾ ಜಾಧವ್ |
| ತಂದೆಃಗಂಡ | ಃ | ಜಾಲಪ್ಪಾ ಜಾಧವ್ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಯು.ಪಿ.ಎಸ್.ಸಿ ವೈದ್ಯಾಧಿಕಾರಿಗಳು ಹೀರಾಪೂರ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ04.07.2025
ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ದಿಃ 21-02-2015 ರಂದು ಚಾಸಾ-1 ರವರನ್ನು ಹಲ್ಲೆಯಲ್ಲಿ ಮೇರೆಗೆ ನಿಂಬರ್ಗಾ ಪಿ.ಸಿ 851 ಪೋಲಿಸರು ನನ್ನ ಮುಂದೆ ಹಾಜರುಪಡಿದ ಮೇರೆಗೆ ನಾನು ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಬಲಭಾಗದ ಕುತ್ತಿಗೆಯ ಮಧ್ಯಭಾಗದಲ್ಲಿ ತೆರಿಚಿದ ಗಾಯ ಒಂದು ಸೆ.ಮೀ ನಷ್ಟು ಇದ್ದು, ಕೆಂಪಗೆ ಆಗಿತ್ತು. ಬಲಭಾಗದ ಕಣ್ಣಿನ ಕೆಳಗೆ ಬಾವು 0.2*0.2 ಇದ್ದು ಕೆಂಪಗೆ ಇದ್ದು, ಬಲಭಾಗದ ಬುಜಕ್ಕೆ ಒಳಪೆಟ್ಟು ಆಗಿದ್ದು 2*5 ಸೆ.ಮೀ ಇದ್ದು, ಕೆಂಪಾಗಿ ಇತ್ತು. ನನ್ನ ಪ್ರಕಾರ ಸದರಿ 2 ಮತ್ತು 3 ಗಾಯಗಳು ಸಾದಾ ಗಾಯಗಳು ಆಗಿದ್ದು, ಅವುಗಳು ಚೂಪಾದ ಮತ್ತು ಮೊಂಡಾದ ವಸ್ತುಗಳಿಂದ ಆಗಿರಬಹುದು. 1 ನೇ ಗಾಯವು ಗಟ್ಟಿಯಾದ ಮತ್ತು ಚೂಪಾದ ವಸ್ತು ಮತ್ತು ಮೊಂಡಾದ ವಸ್ತುಗಳಿಂದ ಆಗಿರಬಹುದು. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಎ.ಡಿ ವಕೀಲರರಿಂದ.**

1 ನೇ ಗಾಯವು ಚೂಪಾದ ವಸ್ತುವಿನಿಂದ ಆಗಿರಬಹುದು ಅಂತಾ ಹೇಳಿದ್ದು, ಅದು ಚಾಕುವಿನಿಂದ ಅಥವಾ ಉಗುರಿನಿಂದಲೂ ಆಗಿರಬಹುದು. 2 ನೇ ಗಾಯವು 1 ನೇ ಗಾಯ ಮಾಡಿದ ವಸ್ತುಗಳಿಂದ ಆಗಿರಬಹುದು ಎಂದರೆ ಸರಿ. 3 ನೇ ಗಾಯವು 1 ನೇ ಗಾಯ ಮಾಡಿದ ವಸ್ತುವಿನಿಂದ ಆಗಿರುವುದಿಲ್ಲ ಎಂದರೆ ಸರಿ. ಈ ಮೇಲೆ ತಿಳಿಸಿದ ಸದರಿ 3 ಗಾಯಗಳು ಆಗಬೇಕಾದರೆ 3 ಪ್ರತ್ಯೇಕ ಹಲ್ಲೆಗಳು ಆಗಬೇಕಾಗುತ್ತದೆ ಎಂದರೆ ಸರಿ. 1 ಮತ್ತು 3 ನೇ ಗಾಯಗಳು ಮುಳ್ಳಿನ ಮೇಲೆ ಬಿದ್ದಾಗ ಆಗುತ್ತವೆ ಎಂದರೆ ಸಾಕ್ಷಿಯು 1 ನೇ ಗಾಯವು ಆಗಬಹುದು ಎಂದು ನುಡಿಯುತ್ತಾರೆ. 3 ನೇ ಗಾಯವು ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದರೆ ಆಗಬಹುದು ಎಂದರೆ ಸರಿ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.